ಅನುಬಂಧ / Annexure

(ಲಕ್ಷ ರೂ.ಗಳಲ್ಲಿ)

ರಸ್ತೆ ಕಾಮಗಾರಿಗಳ ಹೆಸರು	1997-98 ಖರ್ಚು ಮಾಡಿದ ಹಣ	1998-99 ಖರ್ಚು ಮಾಡಿದ ಹಣ	ಒಟ್ಟು
1. ಸೂಳ್ಯ ವಿಧಾನಸಭಾ ಕ್ಷೇತ್ರದ ಜಾಬ್ಬೂರು ಸುಬ್ರಮಣ್ಯ ರಸ್ತೆ (ಕಿಮೀ 0. ರಿಂದ 4.00)	2.37	6.49	8.86
2. ಮೈಸೂರು-ಬಂಟ್ವಾಳ ರಸ್ತೆ (ಸರಪಳಿ 148.50 ರಿಂದ 186.20 ವರೆಗೆ)	2.73	9.68	12.41
3. ದರ್ಬೆ-ಸುಬ್ರಮಣ್ಯರಸ್ತೆ (ಸರಪಳಿ 28.80 ರಿಂದ 53.00)	1.57	2.27	3.84
4. ಕುಂಬ್ರಾ ಬೆಳ್ಳಾರ - ಸುಬ್ರಮಣ್ಯ ರಸ್ತೆ (ಕಿಮೀ 17.60ರಿಂದ 23.60 ವರೆಗೆ)	0.39	3.02	3.41
5. ಸುಬ್ರಮಣ್ಯ-ಗುಂಡ್ಯ ರಸ್ತೆ (ಕಿಮೀ 0.00 ರಿಂದ 16.00ವರೆಗೆ)	0.82	0.86	1.68
6. ಅಯ್ಯನಕಟ್ಟೆ-ಬೆಂಗಮಲೆ ರಸ್ತೆ(0.00 ರಿಂದ 11.60 ವರೆಗೆ)	0.99	1.65	2.64
7. ಸುಬ್ರಮಣ್ಯ ಬೆಳ್ತಂಗಡಿ- ಧರ್ಮಸ್ಥಳ ಕಾರ್ಕಳ ಉಡುಪಿ ರಸ್ತೆ(0.00 ರಿಂದ 3.60)	0.48	2.99	3.47
8. ಎಲೆಮಲೆ-ಅರಂತೋಡು ರಸ್ತೆಗಳಿಗೆ(0.00 ರಿಂದ 13.60 ಕಿ.ಮೀ ವರೆಗೆ)	0.66	0.72	1.38
ಒಟ್ಟು	10.01	27.68	37.69

ಆಲೂರು ಸಿದ್ದಾಪುರದಲ್ಲಿರುವ ಪಶುವೈದ್ಯ ಕೇಂದ್ರದಲ್ಲಿ ಖಾಲಿ ಇರುವ ಹುದ್ದೆಗಳು

1667 (2319) ಶ್ರೀ ಅಪ್ಪಚ್ಚು ರಂಜನ್.ಎಂ.ಪಿ. (ಸೋಮವಾರ ಪೇಟೆ) ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ

ಅ) ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕು ಆಲೂರು ಸಿದ್ದಾಪುರದಲ್ಲಿ ಪಶುವೈದ್ಯ ಕೇಂದ್ರ ಇದ್ದು ಇದರಲ್ಲಿ ಮಂಜೂರಾಗಿರುವ ಹುದ್ದೆಗಳೆಷ್ಟು; ಈ ಪೈಕಿ ಎಷ್ಟು ಹುದ್ದೆ ಯಾವಾಗಿನಿಂದ ಖಾಲಿ ಇವೆ;

ಆ) ಖಾಲಿ ಇರುವ ಹುದ್ದೆಗಳನ್ನು ಯಾವಾಗ ತುಂಬಲಾಗುವುದು ?

ಶ್ರೀ ಎ.ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು).

ಅ) (ಸಾಲ್ಲು) ದಿನಾಂಕ 6-2-1999ರಿಂದ ಒಂದು ಪಶು ವೈದ್ಯಾಧಿಕಾರಿ ಹುದ್ದೆ ಖಾಲಿ ಇರುತ್ತದೆ. ದಿನಾಂಕ 10-11-1996ರಿಂದ ಒಂದು 'ಡಿ' ದರ್ಜೆ ಹುದ್ದೆ ಖಾಲಿ ಇದೆ.

ಆ) ಸಾಮಾನ್ಯ ವರ್ಗಾವಣೆ ಸಮಯದಲ್ಲಿ ಪರಿಗಣಿಸಲಾಗುವುದು.

ಸಿದ್ದಾಪುರ ಪಶುವೈದ್ಯ ಚಿಕಿತ್ಸಾಲಯಕ್ಕೆ ಔಷಧಿ ಸರಬರಾಜು

1668 (2320) ಶ್ರೀ ಅಪ್ಪಚ್ಚು ರಂಜನ್.ಎಂ.ಡಿ. (ಸೋಮವಾರ ಪೇಟೆ): ಮಾನ್ಯ ಪಶುಸಂಗೋಪನಾ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆ ಸೋಮವಾರ ಪೇಟೆ ತಾಲ್ಲೂಕು; ಆಲೂರು ಸಿದ್ದಾಪುರ ಪಶುವೈದ್ಯ ಚಿಕಿತ್ಸಾಲಯಕ್ಕೆ ಸರಬರಾಜು ಮಾಡಬೇಕಾದ ಚಿಕಿತ್ಸಾ ಉಪಕರಣ ಔಷಧಿ ಪ್ರಮಾಣ ಎಷ್ಟು: (ಫಿಸಿಕಲ್ ಮತ್ತು ಫೈನಾನ್ಷಿಯಲ್)

ಆ) ಈ ಚಿಕಿತ್ಸಾ ಕೇಂದ್ರಕ್ಕೆ ನಿಗದಿತ ಪ್ರಮಾಣದಲ್ಲಿ ಔಷಧಿ ಸರಬರಾಜಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ:

ಇ) ಈ ಚಿಕಿತ್ಸಾ ಕೇಂದ್ರಕ್ಕೆ ಜೀಪು ಅಥವಾ ಆಂಬುಲೆನ್ಸ್ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಶ್ರೀ ಎ.ಕೃಷ್ಣಪ್ಪ (ಪಶುಸಂಗೋಪನಾ ಮತ್ತು ಸಕ್ಕರೆ ಸಚಿವರು).

ಅ) ಚಿಕಿತ್ಸಾ ಉಪಕರಣಗಳು - ಇಲ್ಲಾ, ರೂ.18,692 ಮೊತ್ತದ 40 ಪ್ರವರ್ಗಕ್ಕೆ ಸೇರಿದ ಔಷಧಿಗಳನ್ನು 1999-2000ನೇ ಸಾಲಿನಲ್ಲಿ ಸರಬರಾಜು ಮಾಡಲಾಗಿದೆ.

ಆ) ಇಲ್ಲ

ಇ) ಇಲ್ಲ

ಸೋಮವಾರ ಪೇಟೆ ತಾಲ್ಲೂಕು ಮಲ್ಲೇಶ್ವರ ಬೆಟ್ಟದ ಅಭಿವೃದ್ಧಿ

1670 (2322) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ.(ಸೋಮವಾರ ಪೇಟೆ): ಮಾನ್ಯ ಪ್ರವಾಸೋದ್ಯಮ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕು ಮಾಲಂಬಿ ಬಳಿ ಇರುವ ಮಲ್ಲೇಶ್ವರ ಬೆಟ್ಟವನ್ನು ಸಾಹಸ ಪ್ರವಾಸೋದ್ಯಮ ಕಾರಣಕ್ಕಾಗಿ ಅಭಿವೃದ್ಧಿ ಪಡಿಸಲು ಸಾಧ್ಯ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಈ ಬೆಟ್ಟ 3000 ಅಡಿ ಎತ್ತರ ಇದ್ದು ಸಾಹಸ ಪ್ರವಾಸೋದ್ಯಮ (ಅಡ್ವೆಂಚರ್ ಟೂರಿಸಮ್) ಗಾಗಿ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುವುದೆ?